**ಪ್ರಮಾಣ ವಚನ ಬೋಧಿಸಿದ ದಿನಾಂಕಃ 07.11.2024**

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

6. ನನ್ನ ತಂಗಿ ತೀರಿಕೊಂಡ ನಂತರ ಆಕೆಯ ಶವವನ್ನು ರಾಜರಾಜೇಶ್ವರಿ ತೆಗೆದುಕೊಂಡು ಹೋಗಿರುತ್ತಾರೆ. ನಮ್ಮನ್ನು ದೂರು ಕೊಟ್ಟ ಮರುದಿನ ಆಸ್ಪತ್ರೆಗೆ ಕರೆಸಿದ್ದರು. ನಮ್ಮ ಜೊತೆಗೆ ಚಾಸಾ-7 ರಿಂದ 9 ಮತ್ತು ನನ್ನ ತಂದೆ ಚಾಸಾ-2 ರವರನ್ನು ಕರೆಸಿದ್ದರು. ಪೊಲೀಸರು ನಮ್ಮನ್ನು ಆಸ್ಪತ್ರೆಯ ಶವಾಗಾರಕ್ಕೆ ಕರೆದುಕೊಂಡು ಹೋಗಿರುತ್ತಾರೆ. ಪೊಲೀಸರು ಅಲ್ಲಿ ನನ್ನ ತಂಗಿಯ ಶವವನ್ನು ತೋರಿಸಿರುತ್ತಾರೆ. ನನ್ನ ತಂಗಿಯ ದೇಹದ ಕುತ್ತಿಗೆಯಲ್ಲಿ ಕಪ್ಪು ಬಣ್ಣದ ಮಾರ್ಕ್ ಇರುತ್ತದೆ. ಶವದ ಮೇಲೆ ಇದ್ದ ನಾಲ್ಕು ಬಟ್ಟೆಗಳನ್ನು ಸಹ ನೋಡಿ ಗುರುತಿಸಿರುತ್ತೇನೆ. ನನ್ನ ತಂಗಿ ಸೀರೆಯಿಂದ ನೇಣು ಹಾಕಿಕೊಂಡಿದ್ದು, ಸದರಿ ಸೀರೆಯನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಬಟ್ಟೆಗಳನ್ನು ಮುದ್ದೆಮಾಲು-1 ರಿಂದ 5 ಎಂದು ಗುರುತಿಸಲಾಯಿತು. (ಸದರಿ ವಸ್ತುಗಳನ್ನು ಪ್ರತ್ಯೇಕವಾದ ಬಿಳಿ ಬಟ್ಟೆಯಲ್ಲಿ ಸೀಲು ಮಾಡಿದ್ದು, ಅವುಗಳನ್ನು ಸರ್ಕಾರಿ ಅಭಿಯೋಜಕರ ಮನವಿ ಮೇರೆಗೆ, ಸೀಲ್ ನ್ನು ಒಡೆದು ಸಾಕ್ಷಿಗೆ ತೋರಿಸಿ ನಂತರ ಮುದ್ದೆಮಾಲಾಗಿ ಗುರುತಿಸಲಾಯಿತು.) ಪೊಲೀಸರು ಶವತನಿಖಾ ವೇಳೆಯಲ್ಲಿ ನಮ್ಮ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ನನ್ನ ತಂಗಿಯ ಶವವನ್ನು ನಾನು ಗುರುತಿಸಿರುತ್ತೇನೆ. ಶವ ಪಂಚನಾಮೆ ಸಂದರ್ಭದಲ್ಲಿ ಪೊಲೀಸರು ಭಾವಚಿತ್ರಗಳನ್ನು ತೆಗೆದಿರುತ್ತಾರೆ. ಸಾಕ್ಷಿ ಶವವನ್ನು ಭಾವಚಿತ್ರದಲ್ಲಿ ಗುರುತಿಸುತ್ತಾರೆ. ಸದರಿ ಭಾವಚಿತ್ರಗಳನ್ನು ನಿಶಾನೆ ಪಿ-8 ಮತ್ತು 9 ಎಂದು ಗುರುತಿಸಲಾಯಿತು. ಸದರಿ ಭಾವಚಿತ್ರಗಳಲ್ಲಿ ಚಾಸಾ-7 ರಿಂದ 9 ಮತ್ತು ಚಾಸಾ-1 ರವರು ಹಾಜರಿರುತ್ತಾರೆ.

7. ಎರಡು ತಿಂಗಳಾದ ನಂತರ ಪೊಲೀಸರು ನನ್ನನ್ನು ಮತ್ತು ಚಾಸಾ-1 ರವರನ್ನು ರಾಮನಗರದ ಪೊಲೀಸ್ ಭವನಕ್ಕೆ ಕರೆಸಿರುತ್ತಾರೆ. ನಾವು ಅಲ್ಲಿ ನನ್ನ ತಂಗಿ ಹಾಗೂ ಆಕೆಯ ಗಂಡನಾದ ಆರೋಪಿಯ ಎರಡು ಭಾವಚಿತ್ರಗಳನ್ನು ಹಾಜರುಪಡಿಸಿರುತ್ತೇವೆ. ಪೊಲೀಸರು ಈ ಬಗ್ಗೆ ಬರವಣಿಗೆ ಮಾಡಿರುತ್ತಾರೆ. ನಮ್ಮ ಸಹಿಗಳನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿ ನಿಶಾನೆ ಪಿ-5 ಮಹಜರ್ ನಲ್ಲಿರುವ ತನ್ನ ಸಹಿಯನ್ನು ಗುರುತಿಸುತ್ತಾರೆ. ಸಾಕ್ಷಿಯ ಸಹಿಯನ್ನು ನಿಶಾನೆ ಪಿ-5 (ಎ) ಎಂದು ಗುರುತಿಸಲಾಯಿತು. ನನ್ನೊಂದಿಗೆ ಒಬ್ಬರು ಮೂರ್ತಿ ಎನ್ನುವವರು ಸಹ ಸಹಿ ಮಾಡಿರುತ್ತಾರೆ. ಸಾಕ್ಷಿ ನಿಶಾನೆ ಪಿ-6 ಮತ್ತು 7 ನ್ನು ನೋಡಿ ಗುರುತಿಸುತ್ತಾರೆ.

<u>**ಪಾಟೀ-ಸವಾಲು ಶ್ರೀ ಆರ್.ಆರ್ ವಕೀಲರಿಂದ ಆರೋಪಿಯ ಪರವಾಗಿಃ**</u>

1. ನನ್ನ ತಂಗಿ ಮತ್ತು ಆರೋಪಿಯ ವಿವಾಹವು ಆಕೆ ತೀರಿಕೊಳ್ಳುವ ನಾಲ್ಕು ವರ್ಷಗಳ ಮೊದಲು ಆಗಿರುತ್ತದೆ. ನನ್ನ ತಂಗಿ ಮತ್ತು ಆರೋಪಿಯು ಪರಸ್ಪರ ಪ್ರೀತಿಸಿ ಮದುವೆ ಆಗಿರುತ್ತಾರೆ. ಅವರ ಪ್ರೀತಿಸಿ ಮದುವೆ ಆಗಿರುವ ವಿಷಯ ನನಗೆ ಗೊತ್ತಿರುತ್ತದೆ. ನನ್ನ ತಂಗಿ ಮದುವೆ ಆಗುವ ಹಿಂದಿನ ದಿನದವರೆಗೂ ನಮ್ಮ ಮನೆಯಲ್ಲಿ ನಮ್ಮ ಜೊತೆಯಲ್ಲಿಯೇ ಇದ್ದಳು. ಆ ನಂತರ ಮದುವೆ ಆಗುವ ಸಂದರ್ಭದಲ್ಲಿ ಮನೆಯಿಂದ ಹೊರಟು ಹೋಗಿರುತ್ತಾಳೆ. ಅವಳು ಮನೆಯಿಂದ ಹೋದ ನಂತರ ನಾವೇನು ದೂರು ಕೊಟ್ಟಿರುವುದಿಲ್ಲ. ಅವಳ ಮದುವೆಗೆ ಮೊದಲು ನಮ್ಮ ಮನೆಯವರೆಲ್ಲ ಆರೋಪಿಯನ್ನು ಮದುವೆ ಆಗುವುದು ಬೇಡ, ನಾವು ಬೇರೆ ಗಂಡು ಹುಡುಕುತ್ತೇವೆ ಎಂದು ಹೇಳಿದ್ದೇವು. ಆರೋಪಿಯನ್ನು ಮದುವೆ ಆಗುವುದು ಏಕೆ ಬೇಡವೆಂದು ಹೇಳಿರುತ್ತೀರಿ ಎಂದರೆ ಸಾಕ್ಷಿ ನಮಗೆ ನನ್ನ ತಂಗಿ ಆರೋಪಿಯನ್ನು ಮದುವೆ ಆಗುವುದು ಇಷ್ಟ ಇರಲಿಲ್ಲ, ನಮಗೆ ಅರೇಂಜ್ ಮ್ಯಾರೇಜ್ ಮಾಡಬೇಕು ಎಂದು ಇರುತ್ತದೆ ಎಂದು ಹೇಳುತ್ತಾರೆ. ನನ್ನ ತಂಗಿಯನ್ನು ಮದುವೆ ಆದ

ನಂತರ ಯಾವಾಗಲೋ ಒಮ್ಮೆ ಒಂದು ಬಾರಿ ನೋಡಿದ್ದೇನು. ಆ ನಂತರ ನೇಣು ಹಾಕಿಕೊಂಡ ನಂತರ ಶವಾಗಾರದಲ್ಲಿ ಶವವನ್ನು ನೋಡಿರುತ್ತೇನೆ. ನನ್ನ ತಂಗಿ ಓಡಿ ಹೋಗಿ ವಿವಾಹ ಆಗಿರುತ್ತಾಳೆ ಎಂದು ನಾವು ಆಕೆಯೊಂದಿಗೆ ಮಾತನಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಸ್ವಲ್ಪ ದಿನಗಳ ಕಾಲ ಮಾತನಾಡುತ್ತಿದ್ದೇವು.

2. ನನ್ನ ತಂಗಿಗೆ ಮದುವೆ ಆಗಿ ನಾಲ್ಕು ವರ್ಷಗಳಾದರು ಮಕ್ಕಳಾಗಿರುವುದಿಲ್ಲ ಎಂದರೆ ಸರಿ. ಯಾವ ಬಗ್ಗೆ ಮಕ್ಕಳಾಗಿರುವುದಿಲ್ಲ ಎಂದು ನಾವೇನು ಪ್ರಶ್ನೆ ಮಾಡಿರುವುದಿಲ್ಲ. ನಾನು ಕೂಲಿ ಕೆಲಸ ಮಾಡುತ್ತೇನೆ. ನಾನು ಮತ್ತು ನನ್ನ ತಂದೆ-ತಾಯಿ ಎಲ್ಲರೂ ಬಿಪಿಎಲ್ ಕಾರ್ಡ್ ಹೋಲ್ಡರ್ಸ್ ಎಂದರೆ ಹೌದು. ನಾವು ಸರ್ಕಾರದಿಂದ ನೀಡಿದ ಮನೆಯಲ್ಲಿ ಇರಲಿಲ್ಲ. ನಮ್ಮ ದೊಡ್ಡಮ್ಮರವರಿಗೆ ಸೇರಿದ ಮನೆಯಲ್ಲಿ ವಾಸವಿದ್ದೇವು. ಅದಕ್ಕೆ ಬಾಡಿಗೆ ಏನೂ ಕೊಡುತ್ತಿರಲಿಲ್ಲ. ಸದರಿ ಮನೆಯನ್ನು ನನ್ನ ದೊಡ್ಡಮ್ಮರವರು ನಮಗೆ ಬಾಡಿಗೆ ಕಟ್ಟಲು ಕಷ್ಟ ಆಗುತ್ತದೆ ಎಂದು ಬಾಡಿಗೆ ಪಡೆಯದೇ ನೀಡಿದ್ದರು. ನನ್ನ ತಂಗಿ ಬದುಕಿದ್ದ ಕಾಲದಲ್ಲಿ ಆಕೆ ಮದುವೆ ಆದ ನಂತರ ನನ್ನ ತಾಯಿಯವರು ಹೋಗಿರುತ್ತಾರೆ. ನನ್ನ ತಂಗಿ ಮದುವೆಯ ಭಾವಚಿತ್ರಗಳು ನನ್ನ ಅಕ್ಕ ಎಂದರೆ ದೊಡ್ಡಮ್ಮನ ಮಗಳ ಮೊಬೈಲ್‌ನಲ್ಲಿ ಇದ್ದವು. ನಮ್ಮ ಯಾರ ಬಳಿಯೂ ಫೋಟೊ ಇರಲಿಲ್ಲ. ನಿಶಾನೆ ಪಿ-6 ಮತ್ತು 7 ರಲ್ಲಿ ನಾವು ಯಾರು ಹಾಜರಿರುವುದಿಲ್ಲ ಎಂದರೆ ಹೌದು. ನನ್ನ ತಂಗಿ ತೀರಿಕೊಳ್ಳುವರೆಗೂ ನನ್ನ ತಂಗಿ ವಾಸವಿದ್ದ ಮನೆಗೆ ಒಂದು ಬಾರಿ ಹೋಗಿದ್ದೆ. ನಂತರ ನಾನು ಆಕೆ ತೀರಿಕೊಂಡ ದಿವಸ ಹೋಗಿರುತ್ತೇನೆ.

3. ಆರೋಪಿತನೇ ನನ್ನ ತಂಗಿ ತೀರಿಕೊಂಡ ಬಗ್ಗೆ ದೂರವಾಣಿ ಕರೆ ಮಾಡಿ ತಿಳಿಸಿರುತ್ತಾನೆ. ನಾನು ಹಾಗೂ ಮನೆಯವರೆಲ್ಲ ಆರೋಪಿ ತಿಳಿಸಿದ ನಂತರ ಅವರ ಮನೆಗೆ ಹೋಗಿರುತ್ತೇವೆ. ನಾವು ಹೋದಾಗ ನನ್ನ ತಂಗಿಯ ಶವ ನೇಣು ಬಿಗಿದ ಸ್ಥಿತಿಯಲ್ಲಿದ್ದು, ಆಕೆಯ ಕಾಲುಗಳು ನೆಲಕ್ಕೆ ತಾಗುತ್ತಿತ್ತು.

ಸೀರೆಯಿಂದ ನೇಣು ಬಿಗಿದಕೊಂಡ ಹಾಗೇ ಕಾಣುತ್ತಿತ್ತು. ಪೊಲೀಸರು ಸಹ ಸ್ಥಳದಲ್ಲಿ ಹಾಜರಿದ್ದರು. ನಮ್ಮ ಊರು ರಾಮನಗರದ ಬಳಿಯ ಚೌಡೇಶ್ವರಿಪುರ ಆಗಿರುತ್ತದೆ. ನನ್ನ ತಂಗಿಯ ಗಂಡನ ಮನೆ ಬೆಂಗಳೂರಿನ ಕಗ್ಗಲೀಪುರದಿಂದ ಮುಂದಕ್ಕೆ ಲಕ್ಷ್ಮೀಪುರ ಎಂಬ ಊರಿನ ನವಗ್ರಾಮದಲ್ಲಿ ಇರುತ್ತದೆ. ಆರೋಪಿ ನನ್ನ ತಂಗಿಯ ಸಾವಿನ ಸುದ್ದಿಯನ್ನು ತಿಳಿಸಿದಾಗ ಆಕೆ ಹೇಗೆ ಸತ್ತಿರುತ್ತಾಳೆ ಎಂದು ನನ್ನ ಭಾವನನ್ನು ನಾನು ಕೇಳಿರುವುದಿಲ್ಲ. ನನ್ನ ಭಾವ ಬೆಳಗಿನ 7.00 ಗಂಟೆ ಸುಮಾರಿಗೆ ನನಗೆ ದೂರವಾಣಿ ಕರೆ ಮಾಡಿರುತ್ತಾರೆ. ನನ್ನ ಭಾವ ಕ್ಯಾಬ್ ಡ್ರೈವರ್ ಆಗಿ ಕೆಲಸ ಮಾಡುತ್ತಾರೆ. ನಾವು ಆರೋಪಿಯ ಮನೆಗೆ ಹೋಗುವಷ್ಟರಲ್ಲಿ 10 ರಿಂದ 11 ಗಂಟೆ ಆಗಿರುತ್ತದೆ. ನಾವು ಹೋಗುವಷ್ಟರಲ್ಲಿ ಆ ಊರಿನ ಗ್ರಾಮಸ್ಧರು ಮತ್ತು ಪೊಲೀಸರು ಹಾಜರಿರುತ್ತಾರೆ. ನಾವು ಹೋದಾಗ ಪೊಲೀಸರನ್ನೇನು ನಾವು ಘಟನೆಯ ಬಗ್ಗೆ ಕೇಳಿರುವುದಿಲ್ಲ. ಆರೋಪಿಯನ್ನು ನಾವು ಮನೆಯ ಬಳಿ ಹೋಗಿ ನೋಡಿದಾಗಲೂ ಸಹ ನನ್ನ ತಂಗಿಯ ಸಾವಿನ ಬಗ್ಗೆ ಏನೂ ಕೇಳಿರುವುದಿಲ್ಲ. ಆರೋಪಿ ನಾವು ಹೋದಾಗ ಇದ್ದರು. ಆ ನಂತರ ಸ್ಥಳದಲ್ಲಿ ಅರ್ಧ ಗಂಟೆಯ ನಂತರ ಕಂಡು ಬಂದಿರುವುದಿಲ್ಲ. ನಾವು ನನ್ನ ತಂಗಿಯ ಮನೆಯ ಬಳಿ ಸುಮಾರು ಮಧ್ಯಾಹ್ನದವರೆಗೆ ಇದ್ದು, ನಂತರ ಪೊಲೀಸ್ ಠಾಣೆಗೆ ಹೋಗಿರುತ್ತೇವೆ. ನಾವು ಅಲ್ಲಿರುವಾಗ ಸುಮ್ಮನೇ ಇದ್ದೇವು. ಆರೋಪಿಯ ತಾಯಿ ಸಹ ಅಲ್ಲಿ ಇದ್ದರು. ನಮ್ಮ ಜೊತೆ ಬಂದವರು ಆರೋಪಿಯ ತಾಯಿಯನ್ನು ಅದು ಇದು ಕೇಳುತ್ತಿದ್ದರು. ನಾವೇನು ಅವರನ್ನು ಕೇಳಿರುವುದಿಲ್ಲ. ನಮ್ಮೊಂದಿಗೆ ಜಯದೀಪ್ ಮತ್ತು ಇನ್ನಿಬ್ಬರು ನಿಶಾನೆ ಪಿ-8 ಭಾವಚಿತ್ರದಲ್ಲಿರುವ ಮೂರು ಜನ ಬಂದಿದ್ದರು. ಅವರು ಏನು ಕೇಳುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಆರೋಪಿಗೆ ತಂದೆ ಇದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಿಶಾನೆ ಪಿ-3, 4, 8 ಮತ್ತು 9 ಭಾವಚಿತ್ರಗಳಲ್ಲಿ ನಾನಾಗಲೀ, ನನ್ನ ತಂದೆಯಾಗಲೀ ಇರುವುದಿಲ್ಲ ಎಂದರೆ ಹೌದು.

4. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನನ್ನ ತಂದೆ-ತಾಯಿಗೆ ಬರುವುದಿಲ್ಲ. ದೂರನ್ನು ನನ್ನ ತಾಯಿ ಕೊಟ್ಟಿರುತ್ತಾರೆ. ನನ್ನ ತಂಗಿಗೆ ನಾಲ್ಕು ವರ್ಷಗಳಾದರೂ ಮಕ್ಕಳಾಗಿರುವುದಿಲ್ಲ ಎಂಬ ಚಿಂತೆ ಕೊರತೆ ಇತ್ತು ಹಾಗೂ ಮಕ್ಕಳಾಗುವುದಿಲ್ಲ ಎಂಬ ಬಗ್ಗೆ ತಿಳಿದು ಮಾನಸಿಕವಾಗಿ ಬಹಳ ಕುಗ್ಗಿದ್ದಳು, ಈ ವಿಷಯ ನಿಮಗೆ ತಿಳಿದಿದೆಯೇ ಎಂದರೆ ಸಾಕ್ಷಿ ಆ ಬಗ್ಗೆ ನಮಗೇನು ಗೊತ್ತಿರುವುದಿಲ್ಲ. ಮದುವೆಗೆ ಮೊದಲು ನನ್ನ ತಂಗಿ ಸಣ್ಣಗಿದ್ದಳು. ಆ ನಂತರ ಸ್ವಲ್ಪ ದಪ್ಪ ಆಗಿದ್ದಳು ಎಂದರೆ ಹೌದು. ನನ್ನ ತಂಗಿಗೆ PCOD ಹಾಗೂ ಥೈರಾಯ್ಡ್ ಸಮಸ್ಯೆ ಇದ್ದ ಕಾರಣ ಆಕೆ ದೈಹಿಕವಾಗಿ ದಪ್ಪವಾಗಿದ್ದಳು ಎಂದರೆ ಸಾಕ್ಷಿ ಆಕೆಗೆ ಏನು ಆರೋಗ್ಯ ಸಮಸ್ಯೆ ಇತ್ತು ಎಂದು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ನನ್ನ ತಂಗಿ ಮನೆಯಲ್ಲಿ ಗೃಹಿಣಿ ಆಗಿದ್ದಳು, ಯಾವುದೇ ಕೆಲಸಕ್ಕೆ ಹೋಗುತ್ತಿರಲಿಲ್ಲ ಎಂದರೆ ಹೌದು. ನನ್ನ ತಂಗಿಯ ಕುಟುಂಬದ ವ್ಯವಹಾರದ ಬಗ್ಗೆ ನಾವೇನು ಕೇಳಿರುವುದಿಲ್ಲ. ಆಕೆಯು ಸಹ ನಮಗೆ ಅದರ ಬಗ್ಗೆ ಹೇಳಿರುವುದಿಲ್ಲ.

5. ನಾನು ದಿನಗೂಲಿ ಕೆಲಸ ಮಾಡುತ್ತೇನೆ. ದಿನಕ್ಕೆ 600 ರೂ ಸಂಪಾದನೆ ಇರುತ್ತದೆ. ವಾರದಲ್ಲಿ ನಾಲ್ಕು ದಿನ ಕೆಲಸ ಇರುತ್ತದೆ. ನನ್ನ ತಾಯಿಗೆ ಸುಮಾರು 43-44 ವರ್ಷ ಇರಬಹುದು. ನನಗೆ ಮೊದಲು ಎರಡು ಮಕ್ಕಳು ಜನಿಸಿ ತೀರಿಕೊಂಡಿರುತ್ತವೆ ಎಂದರೆ ಹೌದು. ನನ್ನ ತಾಯಿಯ ವಯಸ್ಸಿ ನ ಬಗ್ಗೆ ನನಗೆ ಸರಿಯಾದ ಮಾಹಿತಿ ಇರುವುದಿಲ್ಲ ಎಂದರೆ ಹೌದು. ಆಕೆಗೆ ಸುಮಾರು 60 ವಯಸ್ಸು ಇರಬಹುದು. ನನ್ನ ತಂದೆ ನನ್ನ ತಾಯಿಗಿಂತ ವಯಸ್ಸಿ ನಲ್ಲಿ ದೊಡ್ಡವರು ಎಂದರೆ ಹೌದು. ನನ್ನ ತಂದೆ-ತಾಯಿಯನ್ನು ನಾನೇ ದುಡಿದು ಸಾಕುತ್ತಿದ್ದೇನೆ ಎಂದರೆ ಹೌದು. ದಿನಕ್ಕೆ 200 ರಿಂದ 300 ರೂ ಖರ್ಚಾಗಬಹುದು. ನನ್ನ ತಂಗಿ ನನ್ನ ಮತ್ತು ನನ್ನ ತಂದೆಯವರ ಇಚ್ಚೆಗೆ ವಿರುದ್ದವಾಗಿ ಪ್ರೇಮ ವಿವಾಹವಾದ ಕಾರಣ ನಮಗೆ ಆರೋಪಿತನ ಮೇಲೆ ಅಷ್ಟು ಒಲವು ಇರುವುದಿಲ್ಲ, ಆದ ಕಾರಣ ನನ್ನ

ತಾಯಿಯವರ ಮುಖಾಂತರ ದೂರು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ ನನ್ನ ತಂಗಿಯನ್ನು ಪ್ರೀತಿಸುವಾಗ ಆತನಿಗೆ ನನ್ನ ತಂಗಿ ಬಡಕುಟುಂಬದ ಹೆಣ್ಣು ಎಂದು ಗೊತ್ತಿತ್ತು ಎಂದರೆ ಸಾಕ್ಷಿ ಗೊತ್ತಿತ್ತು ಎಂದು ಹೇಳುತ್ತಾರೆ. ಆರೋಪಿಗೆ ಸ್ವಂತ ಮನೆ, ಕಾರು, ವೃತ್ತಿ ಎಲ್ಲ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಆರೋಪಿ ನಮ್ಮ ಬಳಿ ಎಂದಿಗೂ ದುಡ್ಡು ಕೇಳಿರುವುದಿಲ್ಲ. ನನ್ನ ತಂಗಿಯ ಬಳಿ ಕೇಳಿರುತ್ತಾನೆ. ನನ್ನ ತಂಗಿ ನನ್ನ ಬಳಿಯಾಗಲೀ, ನನ್ನ ತಂದೆ-ತಾಯಿ ಬಳಿಯಾಗಲೀ ಹಣ ಕೇಳಿರುವುದಿಲ್ಲ ಎಂದರೆ ಸಾಕ್ಷಿ ಕೇಳುತ್ತಿದ್ದಳು ಎಂದು ಹೇಳುತ್ತಾರೆ. ಆಕೆ ಸಂಘದಲ್ಲಿ ದುಡ್ಡು ತೆಗೆದುಕೊಂಡು ಶಾರ್ಟೇಜ್ ಆದಾಗ ಸಹಾಯ ಮಾಡಲು ಕೇಳುತ್ತಿದ್ದಳು. ಆಕೆ ನನ್ನ ಬಳಿ ಯಾವುದೇ ಹಣ ಕೇಳುತ್ತಿರಲಿಲ್ಲ, ಆಕೆ ತೀರಿಕೊಂಡ ದುಃಖದಲ್ಲಿ ನಾವು ಆರೋಪಿಯ ಮೇಲೆ ಸುಳ್ಳು ಪ್ರಕರಣದ ದಾಖಲಿಸಿ ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ನನ್ನ ತಂಗಿಯ ದೂರವಾಣಿ ಸಂಖ್ಯೆ ನನಗೆ ಹೇಳಲು ಆಗುವುದಿಲ್ಲ. ದೂರಿನಲ್ಲೂ ಸಹ ದೂರವಾಣಿ ಸಂಖ್ಯೆ ಹೇಳಿಲ್ಲ ಎಂದರೆ ಹೌದು. ನನ್ನ ತಂಗಿ ಆಗಾಗ ದೂರವಾಣಿ ಕರೆ ಮಾಡುತ್ತಿದ್ದ ಬಗ್ಗೆ ನಾನು ಈ ಹಿಂದೆ ನನ್ನ ಹೇಳಿಕೆಗಳಲ್ಲಿ ಹೇಳಿಲ್ಲ ಎಂದರೆ ಹೌದು. ನನ್ನೊಂದಿಗಾಗಲೀ ನಮ್ಮ ಮನೆಯವರೊಂದಿಗಾಗಲೀ ಯಾವುದೇ ಸಂಪರ್ಕ ಇಲ್ಲದೇ ಇದ್ದ ಕಾರಣ ನನ್ನ ತಂಗಿ ನನಗೆ ಯಾವುದೇ ವಿಷಯ ಹೇಳಿಲ್ಲ, ದೂರವಾಣಿ ಕರೆಯನ್ನು ಮಾಡಿಲ್ಲ, ಆದ ಕಾರಣ ಮೊಬೈಲ್ ಸಂಖ್ಯೆ ಹೇಳಿಲ್ಲ ಎಂದರೆ ಸರಿಯಲ್ಲ. ಎಲ್ಲ ವಿಷಯಗಳು ನಮಗೆ ತಿಳಿದಿದ್ದರೂ, ಆರೋಪಿ ಯಾವುದೇ ಅಪರಾಧವನ್ನು ಎಸಗದೇ ಇದ್ದರು ನನ್ನ ತಂಗಿಯ ಸಾವಿನ ನೋವು ಮತ್ತು ದುಃಖದಲ್ಲಿ ಆರೋಪಿತನ ವಿರುದ್ಧ ನನ್ನ ತಾಯಿಯವರ ಮುಖಾಂತರ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ಶ್ರೀ. ದೇವಾನಂದ)
6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.